INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-6, Issue -1, January-February, 2024,
PageNo,48-54
Peer -Reviewed, Refereed Journal

# ಮೈಸೂರು ಮಹಾನಗರದ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು: ಉಗಮ ಮತ್ತು ಬೆಳವಣಿಗೆಯ ಕುರಿತ ಒಂದು ಸ್ಥೂಲಪರಿಚಯ

ಡಾ.ಸಿ.ಈ.ಲೋಕೇಶ [1].

ಮೈಸೂರು ಮಹಾನಗರದಲ್ಲಿ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಉಗಮ ಹಾಗೂ ಅದರ ಬೆಳವಣಿಗೆಗಳನ್ನು ಕುರಿತ ಚಿತ್ರಣವನ್ನು ಪ್ರಸ್ತುತಪಡಿಸುವ ಮುನ್ನ, ಮಹಿಳಾ ಎನ್ನುವ ಪರಿಕಲ್ಪನೆಗೆ ಇರಬಹುದಾದ ವಿವಿಧ ಆಯಾಮಗಳನ್ನು ನಾವು ಅರ್ಥ ಮಾಡಿಕೊಳ್ಳುವುದು ಅಗತ್ಯ. ಎಲ್ಲೋ ಒಂದೆಡೆ, ಮಹಿಳಾ ಶಿಕ್ಷಣ ಎಂಬ ಪದ ಮಹಿಳೆಯರಿಗಾಗಿಯೇ ಪ್ರತ್ಯೇಕವಾದ ಒಂದು ಶಿಕ್ಷಣ ವ್ಯವಸ್ಥೆ ಜಾರಿಯಲ್ಲಿದೆ. ಇತ್ತು ಅಥವಾ ಇರಬೇಕು ಎಂಬ ಅರ್ಥವನ್ನು ನೀಡುವ ಸಾಧ್ಯತೆಯು ಇರುವುದರಿಂದಲೇ ಈ ಪರಿಕಲ್ಪನೆಯನ್ನು ಬಹು ಎಚ್ಚರಿಕೆಯಿಂದಲೇ ಬಳಸಬೇಕು. ಎರಡನೆಯದಾಗಿ, ಮಹಿಳಾ ಶಿಕ್ಷಣ ಎನ್ನುವ ಪದವನ್ನು ಮಹಿಳೆಯರಿಗೆ ಶಿಕ್ಷಣ ಅವಕಾಶಗಳನ್ನು ಒದಗಿಸಲು ತೆರೆದಂಥ ಶಾಲೆಗಳು ಅಥವಾ ಕಾಲೇಜುಗಳು ಅಥವಾ ವಿಶ್ವವಿದ್ಯಾನಿಲಯಗಳು ಎಂಬ ಅರ್ಥದಲ್ಲೂ ನೋಡುವ ಸಾಧಯ್ತೆಯಿದೆ. ಆದರೆ, ಈ ಎರಡು ದೃಷ್ಟಿಕೋನಗಳೂ ಮಹಿಳಾ ಶಿಕ್ಷಣ ಎನ್ನುವ ಪರಿಕಲ್ಪನೆಯ ಅರ್ಥವನ್ನು ಸಂಕುಚಿತಗೊಳಿಸುವುದರಿಂದ ಈ ಲೇಖನದಲ್ಲಿ ಮಹಿಳಾ ಶಿಕ್ಷಣ ಎನ್ನುವ ಪದವನ್ನು ಮಹಿಳೆಯರಿಗಾಗಿ ಲಭ್ಯವಿರುವ ಶಿಕ್ಷಣಾವಕಾಶಗಳು ಎಂಬ ಅರ್ಥದಲ್ಲಿ ಬಳಸಲಾಗಿದೆ.

ಹೆಣ್ಣು ಮಕ್ಕಳಿಗೆ ಶಿಕ್ಷಣಾವಕಾಶಗಳನ್ನು ಸ್ವಾತಂತ್ರ್ಯಪೂರ್ವದಲ್ಲಿಯೆ ತೆರೆದಿಟ್ಟ ಕೀರ್ತಿ ಮೈಸೂರು ನಗರಕ್ಕೆ ಸೇರುತ್ತದೆ. ಮೈಸೂರು ಸಂಸ್ಥಾನವನ್ನು ಆಳಿದ ಒಡೆಯರುಗಳು ತಳೆದ ಪ್ರಗತಿಪರ ನಿಲುವುಗಳ ಕಾರಣದಿಂದಾಗಿಯೇ ಈ ನಗರದ ಹೆಣ್ಣು ಮಕ್ಕಳು ಭಾರತದ ಅನೇಕ ಭಾಗಗಳ ಹೆಣ್ಣು ಮಕ್ಕಳೂ ಜ್ಞಾನಾರ್ಜನೆಗಾಗಿ ಪಟ್ಟ ಅಥವಾ ಇನ್ನೂ ಪಡುತ್ತಿರುವ ಪಾಡನ್ನು ಪಡಬೇಕಾಗಿರಲಿಲ್ಲ ಎನ್ನುವುದು ಗಮನಾರ್ಹ. ಹತ್ತೊಂಭತ್ತನೇ ಶತಮಾನದಲ್ಲೇ, ಎಂದರೆ; ಸರಿಸುಮಾರು ಕ್ರಿ.ಶ. 1844ರಲ್ಲೇ ಹೆಣ್ಣು ಮಕ್ಕಳಿಗಾಗಿ ದೇಶದ ಮೊದಲ ವಸತಿ ಶಾಲೆಯನ್ನು ಮೈಸೂರು ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ

---

[1].ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ/ಪುರಾತತ್ವಶಾಸ್ತ್ರ ಮತ್ತು ವಸ್ತುಸಂಗ್ರಹಾಲಯ ವಿಭಾಗ
ಮಹಾರಾಜ ಕಾಲೇಜು ಮೈಸೂರು

ಒಡೆಯರ್ ಅವರು ತೆರೆದದ್ದು, ಅವರ ದೂರದೃಷ್ಟಿಗೆ ಸಾಕ್ಷಿಯಾಗಿದೆ. ಮಹಾರಾಜರ ಈ ಪ್ರಯತ್ನದ ಫಲವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಬಾಲಕಿಯರ ದಾಖಲಾತಿ ಪ್ರಮಾಣ ಕ್ರಮೇಣ ಹೆಚ್ಚುತ್ತಾ ಬಂತು.

ಭಾರತದಲ್ಲಿ ಮಹಿಳೆಯರ ಶಿಕ್ಷಣ ಇತಿಹಾಸದಲ್ಲಿ ಮೈಸೂರು ಮಹಾನಗರಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ಸರಿಸುಮಾರು ಕ್ರಿ.ಶ. 1881ನೇ ಜನವರಿ ತಿಂಗಳಿನಲ್ಲಿ ದೇಶದಲ್ಲಿ ಮಹಿಳೆಯರಿಗಾಗಿಯೇ ಪ್ರಾರಂಭವಾದ ಪ್ರಥಮ ಹೆಣ್ಣು ಮಕ್ಕಳ ಶಾಲೆ ಮೈಸೂರು ನಗರದಲ್ಲೇ ಇದ್ದದ್ದು ಎಂದರೆ, ಈ ನಗರಕ್ಕೂ ಹೆಣ್ಣು ಮಕ್ಕಳ ಶಿಕ್ಷಣಕ್ಕೂ ಇರುವ ನಿಕಟ ಸಂಬಂಧ ಏನು ಎಂಬುದು ತಿಳಿದುಬರುತ್ತದೆ. ಈ ಶಾಲೆಯನ್ನು ಸರಿಸುಮಾರು ಕ್ರಿ.ಶ. 1881ರಲ್ಲಿ ಒಂದು ಖಾಸಗಿ ಶಾಲೆಯನ್ನಾಗಿ ಪ್ರಾರಂಭ ಮಾಡಿದ್ದು ಎ.ನರಸಿಂಹ ಐಯ್ಯಂಗಾರ್ ಅವರು ಎಂದು ಹೇಳಬಹುದು. ಈ ಶಾಲೆಯ ಪ್ರಾರಂಭಿಕ ಹಂತದಲ್ಲಿ ಕೇವಲ 28 ವಿದ್ಯಾರ್ಥಿನಿಯರಿದ್ದು, ಅವರಿಗೆ ಕನ್ನಡ ಭಾಷೆಯನ್ನೇ ಹೆಚ್ಚಾಗಿ ಕಲಿಸಲಾಗುತ್ತಿತ್ತು. ಆದರೆ ಮೇಲ್ಜಾತಿಯ ಹೆಣ್ಣು ಮಕ್ಕಳ ಶಿಕ್ಷಣದ ಕಡೆಗೆ ವಿಶೇಷ ಗಮನಹರಿಸಿದ್ದ, ಈ ಶಾಲೆಯಲ್ಲಿ ಅವರಿಗೆ ಮಾತ್ರ ಇಂಗ್ಲೀಷಿನಲ್ಲಿಯೂ ಶಿಕ್ಷಣವನ್ನು ನೀಡಲು ವ್ಯವಸ್ಥೆ ಮಾಡಲಾಗಿತ್ತು. ಈ ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಕನ್ನಡದ ಪದ್ಯ–ಗದ್ಯ, ಗಣಿತ, ಸಂಗೀತ, ಭೂಗೋಳ, ನೈರ್ಮಲ್ಯದಂತಹ ವಿಷಯಗಳೊಡನೆ ಹೊಲಿಗೆ, ವಸ್ತ್ರಾಲಂಕಾರದ ಕಲೆಗಳ ಜ್ಞಾನವನ್ನೂ ನೀಡಲಾಗುತ್ತಿತ್ತು.

ಪಾಶ್ಚಿಮಾತ್ಯ ಮತ್ತು ಸಾಂಪ್ರದಾಯಿಕ ವಿಚಾರಗಳು ಹಾಗೂ ಜೀವನ ವಿಧಾನಗಳ ಅಪೂರ್ವ ಮಿಶ್ರಣವನ್ನು ಒಳಗೊಂಡ ಜ್ಞಾನವನ್ನು ಹೆಣ್ಣು ಮಕ್ಕಳಿಗೆ ನೀಡುವುದೇ ಈ ಶಾಲೆಯ ಮುಖ್ಯ ಉದ್ದೇಶವಾಗಿತ್ತು. ಗೃಹಕೃತ್ಯಕ್ಕೆ ಸಂಬಂಧಿಸಿದ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜೊತೆಜೊತೆಗೆ ಕುಟುಂಬ ಜೀವನದಲ್ಲಿ ಸತಿ–ಪತಿಯರ ನಡುವ್ ಎಇರುವ ಬೌದ್ಧಿಕ ಅಂತರವನ್ನು ಕಡಿಮೆ ಮಾಡುವುದೂ ಈ ಶಿಕ್ಷಣದ ಪ್ರಮುಖ ಗುರಿಗಳಲ್ಲಿ ಒಂದಾಗಿತ್ತು ಎಂಬುದು ಗಮನಾರ್ಹ.

ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವವನ್ನು ಮೈಸೂರಿನ ಜನ ಸಮುದಾಯಗಳು ಅರಿಯುತ್ತಾ ಹೋದಹಾಗೆಲ್ಲಾ, ಈ ಶಾಲೆಯ ದಾಖಲಾತಿ ಹೆಚ್ಚುತ್ತಾ ಹೋಯಿತು. ಶಾಲೆ ಪ್ರಾರಂಭವಾಗಿ ಐದು ವರ್ಷಗಳ ಅನಂತರ ವಿದ್ಯಾರ್ಥಿನಿಯರ ಸಂಖ್ಯೆ ಹತ್ತಿರ 500ಕ್ಕೆ ಏರಿತು. ಇಲ್ಲಿ ಕ್ರಮೇಣ ವಿಜ್ಞಾನದ ವಿಷಯಗಳನ್ನೂ ಬೋಧನೆ ಮಾಡಲಾರಂಭಿಸಲಾಯಿತು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಾಮಾಜಿಕ ಸ್ವೀಕೃತಿ ಹೆಚ್ಚುತ್ತಾ ಹೋದ ಹಾಗೆಲ್ಲಾ, ಈ ಶಾಲೆಯ ಖ್ಯಾತಿಯೂ ಹೆಚ್ಚುತ್ತಾ ಹೋಗಿ ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳು, ದೇಶದ ಇತರ ಭಾಗಗಳಿಂದ ರಾಜವಂಶಸ್ಥರು ಈ ಶಾಲೆಗೆ ಭೇಟಿಯನ್ನು ಇತ್ತು ಅದರ ಕಾರ್ಯಚಟುವಟಿಕೆಗಳ ಬಗೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಹೋದರು.

ಶಾಲೆ ಪ್ರಾರಂಭವಾದ 14 ವರ್ಷಗಳ ಅನಂತರ, ಎಂದರೆ; ಸರಿಸುಮಾರು ಕ್ರಿ.ಶ. 1895ರಲ್ಲಿ ಪ್ರೌಢಶಾಲಾ ಮಟ್ಟಕ್ಕೆ ಏರಿಸಲ್ಪಟ್ಟ ಈ ಸಂಸ್ಥೆಯು ಸರಿಸುಮಾರು ಕ್ರಿ.ಶ. 1902ನೇ ಇಸವಿಯಲ್ಲಿ ಮದ್ರಾಸು ವಿಶ್ವವಿದ್ಯಾನಿಲಯದ ಅಧೀನ ಕಾಲೇಜಾಗಿ ಸರಿಸುಮಾರು ಕ್ರಿ.ಶ. 1902ನೇ ಇಸವಿಯಲ್ಲಿ ಮಹಾರಾಣಿ ಕಾಲೇಜು ಎಂಬ ಹೆಸರಿನಿಂದ ಅಸ್ತಿತ್ವಕ್ಕೆ ಬಂತು. ಇದೇ ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ಸರಿಸುಮಾರು ಕ್ರಿ.ಶ. 1906ರಲ್ಲಿ ಭಾರತದ ಪ್ರಥಮ ಮಹಿಳಾ ಬಿ.ಎ. (ಬ್ಯಾಚುಲರ್ ಆಫ್ ಆರ್ಟ್ಸ್) ಪದವೀಧರರು ಎಂಬ ಹೆಗ್ಗಳಿಕೆಗೆ ಪಾತ್ರರಾದದ್ದು, ಭಾರತದ ಶಿಕ್ಷಣ ಇತಿಹಾಸದಲ್ಲೇ ಮೈಸೂರು ಮಹಾನಗರಕ್ಕೆ ಅಜರಾಮರ ಎನಿಸುವಂಥ ಸ್ಥಾನವನ್ನಿತ್ತಿದೆ. ಈ ಶಾಲೆ ಪ್ರಾರಂಭವಾದ ಹೊತ್ತಿನಲ್ಲಿ ಇಡೀ ಮೈಸೂರು ಸಂಸ್ಥಾನದಲ್ಲೇ ಶೇಕಡಾ 3ರಷ್ಟು ಹೆಣ್ಣು ಮಕ್ಕಳು ಮಾತ್ರ ಶಾಲೆಗಳಿಗೆ ಹೋಗುತ್ತಿದ್ದರೆಂಬುದನ್ನು ನಾವು ಗಮನಿಸಬೇಕು. ಮೈಸೂರು ನಗರದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಬೆಳವಣಿಗೆಯನ್ನು ಒಂದು ಐತಿಹಾಸಿಕ ನಿಟ್ಟಿನಲ್ಲಿ ವಿಶ್ಲೇಷಣೆ ಮಾಡುವಾಗ, ಆಗಿನ ಕಾಲಘಟ್ಟದಲ್ಲಿ ಮಹಿಳೆಯರು ಶಾಲಾ–ಕಾಲೇಜುಗಳಿಗೆ ಹೋಗಿ ಶಿಕ್ಷಣವನ್ನು ಪಡೆಯಲು ಇದ್ದಂತಹ ವಿರೋಧದ ನಡುವೆಯೂ ಈ ನಗರ ಮಹಿಳೆಯರಿಗೆ ಜ್ಞಾನವನ್ನು ಒದಗಿಸಲು ಮುಂದಾಗಿತ್ತು ಎಂಬುದನ್ನು ನಾವು ವಿಶೇಷವಾಗಿ ಸ್ಮರಿಸಬೇಕು. ಈ ದೇಶವನ್ನು ಹತ್ತಿರ–ಹತ್ತಿರ ಎರಡು ಶತಮಾನಗಳಷ್ಟು ಕಾಲ ಆಳಿದ ಬ್ರಿಟಿಷರು ಸಾಮಾಜಿಕ ವಿರೋಧಕ್ಕೆ ಹೆದರಿ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡುವ ಸಂಸ್ಥೆಗಳನ್ನು ಪ್ರಾರಂಭಿಸುವುದಕ್ಕಾಗಲಿ, ಹೆಣ್ಣು ಮಕ್ಕಳ ಶಾಲೆಗಳಿಗೆ ಸರ್ಕಾರಿ ಅನುದಾನವನ್ನು ನೀಡುವುದಕ್ಕಾಗಲಿ ಸಿದ್ಧರಿರಲಿಲ್ಲ. ಏಕೆಂದರೆ, ಈ ದೇಶದ ಸಂಪ್ರದಾಯವಾದಿಗಳನ್ನು ವಿರೋಧ ಮಾಡಿಕೊಳ್ಳಲು ಅವರಲ್ಲಿ ಹಿಂಜರಿಕೆಯಿದ್ದಿತು. ಆದರೆ ಮೈಸೂರಿನಲ್ಲಿ ಹೆಣ್ಣು ಮಕ್ಕಳ ಶಿಕ್ಷಣವನ್ನು ಉತ್ತೇಜಿಸಲು ರಾಜವಂಶಸ್ಥರಾಗಲಿ, ದಿವಾನರಾಗಲಿ, ಸಾರ್ವಜನಿಕರಾಗಲಿ ಎಂದಿಗೂ ಹಿಂಜರಿಯಲಿಲ್ಲ. ಮೈಸೂರು ಮಹಾನಗರದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಎಷ್ಟು ಪೂರಕವಾದ ವಾತಾವರಣವಿತ್ತೆಂಬುದು ಇದರಿಂದಲೇ ತಿಳಿಯುತ್ತದೆ.

ಹೆಣ್ಣು ಮಕ್ಕಳಿಗೆ ಶಿಕ್ಷಣಾವಕಾಶಗಳನ್ನು ಒದಗಿಸುವುದು ಎಷ್ಟು ಮುಖ್ಯವೋ, ಅವರ ಬೆಳವಣಿಗೆಯನ್ನು ಕುಂಠಿತಗೊಳಿಸುವ ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನ ಮಾಡುವುದೂ ಅಷ್ಟೇ ಮುಖ್ಯ ಎಂಬುದನ್ನು ಮೈಸೂರಿನ ರಾಜವಂಸಸ್ಥರು ಮನಗಂಡಿದ್ದರು. ಸರಿಸುಮಾರು ಕ್ರಿ.ಶ. 1894ರಲ್ಲೇ ಮೈಸೂರಿನ ಅರಸರು 8 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಹೆಣ್ಣು ಮಕ್ಕಳು ವಿವಾಹವಾಗುವುದನ್ನು ನಿಷೇಧಿಸುವಂಥ ಕಾನೂನನ್ನು ಜಾರಿಗೊಳಿಸಿದ್ದರು. ಇಷ್ಟೇ ಅಲ್ಲ ವಿಧವಾ ವಿವಾಹಕ್ಕೆ ಹಾಗೂ ನಿರಾಶ್ರಿತ ಮಹಿಳೆಯರ ವಿವಾಹಕ್ಕೂ ಮೈಸೂರಿನಲ್ಲಿ ಉತ್ತೇಜನವಿತ್ತು. ಮೈಸೂರು ಸಂಸ್ಥಾನದಲ್ಲಿ ಸರಿಸುಮಾರು ಕ್ರಿ.ಶ. 1923ರಲ್ಲಿ ಮಹಿಳೆಯರಿಗೇ ಮತದಾನದ ಹಕ್ಕನ್ನು ನೀಡಲಾಯಿತು. ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸರಿಸುಮಾರು ಕ್ರಿ.ಶ. 1902–1940ರಲ್ಲಿ ಅವರ ಆಡಳಿತದಲ್ಲಿ ಪ್ರೌಢ ಶಾಲೆಯನ್ನು

ಮುಗಿಸುವವರೆಗೆ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಲಾಗುತ್ತಿತ್ತು. ವೃತ್ತಿಪರ ಕೋರ್ಸುಗಳಲ್ಲಿ ಅಧ್ಯಯನ ಮಾಡುವ ಹೆಣ್ಣು ಮಕ್ಕಳಿಗೆ ಅರ್ಧದಷ್ಟು ಶುಲ್ಕವನ್ನು ಮಾತ್ರ ವಿಧಿಸಲಾಗುತ್ತಿತ್ತು ಎಂಬುದಕ್ಕೆ ದಾಖಲೆಗಳಿದ್ದು, ಈ ನಿರ್ಧಾರ ಮಿಸೂರು ಅರಸರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ನೀಡಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ.

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಉತ್ತೇಜಿಸುವಂತಹ ಮನಸ್ಸಿರುವ ಯಾವುದೇ ಆಡಳಿತಾತ್ಮಕ ವ್ಯವಸ್ಥೆ ಕೇವಲ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದಲ್ಲ, ಆ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳನ್ನು ಸೇರಲು ಅವರಿಗಾಗಿ ವಸತಿ ಶಾಲೆಗಳನ್ನು ತೆರೆಯುವುದು, ಶಾಲಾ ಶುಲ್ಕವನ್ನು ಕಡಿತಗೊಳಿಸುವುದು, ಅವರ ಪ್ರಗ್ರತಿಗೆ ಅಡ್ಡಿಯನ್ನು ಉಂಟುಮಾಡುವಂತಹ ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನ ಮಾಡಲು ಕ್ರಮಗಳನ್ನು ಕೈಗೊಳ್ಳುವುದು ಇವೇ ಮುಂತಾದ ನಿರ್ಧಾರಗಳನ್ನು ಮೈಸೂರು ಸಂಸ್ಥಾನದಲ್ಲಿ ಕೈಗೊಂಡಿದ್ದು, ಆ ಕಾಲದ ರಾಜರ ದೂರದೃಷ್ಟಿಗೆ, ಪ್ರಗತಿಪರ ಧೋರಣೆಗೆ ಸಾಕ್ಷಿಯೇ ಆಗಿದೆ. ವಿದ್ಯಾರ್ಥಿನಿಯರು ಹೊರ ದೇಶಗಳಿಗೆ ಹೋಗಿ ವ್ಯಾಸಂಗ ಮಾಡಲು ಕೂಡ ಆರ್ಥಿಕ ನೆರವನ್ನು ನೀಡುತ್ತಿದ್ದರು ಎಂದರೆ; ಆಗಿನ ಕಾಲಕ್ಕೇ ಆಳುವ ದೊರೆಗಳು ಎಷ್ಟು ಮುಂದಾಲೋಚನೆ ಮಾಡುತ್ತಿದ್ದರು ಎಂಬುದನ್ನು ತೋರಿಸುತ್ತದೆ.

ನೂರು ವರ್ಷಗಳ ಹಿಂದೆ ಮಹಿಳೆಯರು ಮನೆಯಿಂದ ಹೊರ ಹೋಗಿ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಇದ್ದಂತಹ ವಿರೋಧವನ್ನೂ ಮೆಟ್ಟಿ ಮೈಸೂರಿನ ದೊರೆಗಳು, ದಿವಾನರು ಹಾಗೂ ಪ್ರಗತಿಪರ ಪ್ರಜೆಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸಂಸ್ಥೆಗಳನ್ನು ತೆರೆಯುವುದೇ ಅಲ್ಲದೇ, ಅದರ ಪರ ಜನಾಭಿಪ್ರಾಯವನ್ನು ಮೂಡಿಸುವುದರಲ್ಲೂ ಪ್ರಮುಖ ಪಾತ್ರವನ್ನು ವಹಿಸಿದ್ದರು ಎನ್ನುವುದು ವಿಶೇಷವಾಗಿ ಸ್ಮರಿಸಬೇಕಾದಂತಹ ವಿಷಯವೇ ಆಗಿರುತ್ತದ. ಸರಿಸುಮಾರು ಕ್ರಿ.ಶ. 1908ನೇ ಇಸವಿಯಲ್ಲಿ ಪ್ರಕಟವಾದ ಇಂಪೀರಿಯಲ್ ಗೆಜೆಟಿಯರ್ ಪುಟ ಸಂಖ್ಯೆ –244ರ ಪ್ರಕಾರ; ಸರಿಸುಮಾರು ಕ್ರಿ.ಶ. 1881ರಲ್ಲಿ ಪ್ರಾರಂಭವಾದ ಮಹಾರಾಣಿ ಹೆಣ್ಣು ಮಕ್ಕಳ ಶಾಲೆ ಮಹಿಳಾ ಶಿಕ್ಷಣಕ್ಕೆ ಒಂದು ಹೊಸ ದಿಕ್ಕನ್ನು ನೀಡಿತು. ಈ ಶಾಲೆಗೆ ಎಲ್ಲ ವಲಯಗಳಿಂದ ದೊರೆತ ಪ್ರೋತ್ಸಾಹ ಎಷ್ಟು ಪ್ರಬಲವಾಗಿತ್ತೆಂದರೆ, ಹೆಣ್ನು ಮಕ್ಕಳ ಶಿಕ್ಷಣಕ್ಕಿದ್ದ ವಿರೋಧವನ್ನೂ ಅದು ಮರೆಮಾಡಿತು.

ಮೈಸೂರು ಮಹಾನಗರದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ದೊರೆತ ವ್ಯಾಪಕ ಬೆಂಬಲವಾದ ಪರಿಣಾಮ ಇಡೀ ರಾಜ್ಯದಲ್ಲಿ ಕಾಣಿಸಿಕೊಳ್ಳಲಾರಂಭಿಸಿದ್ದನ್ನು ನಾವಿಲ್ಲಿ ಗಮನಿಸಬೇಕು. ಸರಿಸುಮಾರು ಕ್ರಿ.ಶ. 1890 ರಿಂದ 1900ರವರೆಗಿನ ಹತ್ತು ವರ್ಷಗಳಲ್ಲಿ ವಿವಿಧ ಶಾಲೆಗಳಲ್ಲಿ ದಾಖಲಾಗಿದ್ದ ಹೆಣ್ಣು ಮಕ್ಕಳ ಸಂಖ್ಯೆ ಕ್ರಮೇಣ ಏರಿಕೆಯನ್ನು ಕಂಡಿತು. ಈ ಅವಧಿಯಲ್ಲಿ ಹೆಣ್ಣು ಮಕ್ಕಳ ದಾಖಲಾತಿ 5,805 ರಿಂದ 11,678ಕ್ಕೆ ಏರಿದರೆ, ಹೆಣ್ಣು

ಮಕ್ಕಳ ಶಾಲೆಗಳ ಸಂಖ್ಯೆ 72 ರಿಂದ 215ಕ್ಕೆ ಹೆಚ್ಚಿದ್ದು, ಈ ಪ್ರದೇಶದಲ್ಲಿ ಮಹಿಳಾ ಶಿಕ್ಷಣಕ್ಕೆ ದೊರೆತ ಬೆಂಬಲಕ್ಕೆ ಸಾಕ್ಷಿಯಾಗಿದೆ. ಮಹಿಳಾ ಶಿಕ್ಷಣಕ್ಕೆ ಮೈಸೂರು ನಗರದಲ್ಲಿ ದೊರೆತ ಪ್ರೋತ್ಸಾಹದ ಪ್ರಭಾವ ಇಡೀ ರಾಜ್ಯದಲ್ಲಿಯೇ ಕೆಂಡಿದ್ದು, ಸರಿಸುಮಾರು ಕ್ರಿ.ಶ. 1915–16ರ ವೇಳೆಗೆ ವಿವಿಧ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಹೆಣ್ಣು ಮಕ್ಕಳ ಶಾಲೆಗಳ ಸಂಖ್ಯೆ 72 ರಿಂದ 215ಕ್ಕೆ ಹೆಚ್ಚಿದ್ದು ಈ ಪ್ರದೇಶದಲ್ಲಿ ಮಹಿಳಾ ಶಿಕ್ಷಣಕ್ಕೆ ದೊರೆತ ಬೆಂಬಲಕ್ಕೆ ಸಾಕ್ಷಿಯಾಗಿದೆ. ಮಹಿಳಾ ಶಿಕ್ಷಣಕ್ಕೆ ಮೈಸೂರು ಮಹಾನಗರದಲ್ಲಿ ದೊರೆತ ಪ್ರೋತಾಹದ ಪ್ರಭಾವ ಇಡೀ ರಾಜ್ಯದಲ್ಲಿಯೇ ಕಂಡಿದ್ದು ಸರಿಸುಮಾರು ಕ್ರಿ.ಶ. 1915–16ರ ವೇಳೆಗೆ ವಿವಿಧ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಹೆಣ್ಣು ಮಕ್ಕಳ ಸಂಖ್ಯೆ 72,444ಕ್ಕೆ ಏರಿತ್ತು.

ಮೈಸೂರು ಮಹಾನಗರ ಹೆಣ್ಣು ಮಕ್ಕಳು ಶಾಲೆಗಳಿಗೆ ಹೋಗುವುದಕ್ಕೆ ಹೇಗೆ ನಾಂದಿಯನ್ನು ಹಾಡಿತೋ, ಹಾಗೆಯೇ ಅವರು ಉನ್ನತ ಶಿಕ್ಷಣವನ್ನು ಪಡೆಯುವುದರತ್ತ ಕೂಡ ವಿಶೇಷ ಗಮನಹರಿಸಿದ್ದು ದೇಶದ ಮಹಿಳಾ ಶಿಕ್ಷಣದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎಂದರೂ ತಪ್ಪಾಗಲಾರದು. ಸರಿಸುಮಾರು ಕ್ರಿ.ಶ. 1891ನೇ ಇಸವಿಯಲ್ಲಿ, ಅದುವರೆವಿಗೂ ಪ್ರೌಢಶಾಲಾ ಮಟ್ಟದ ಶಿಕ್ಷಣವನ್ನು ಮಾತ್ರ ನೀಡುತ್ತಿದ್ದ ಮಹಾರಾಣಿ ಹೆಣ್ಣು ಮಕ್ಕಳ ಶಾಲೆಯಲ್ಲಿ ಮೊದಲನೇ ವರ್ಷದ ಕಲಾ ವಿಭಾಗವನ್ನು ತೆರೆಯುವುದರ ಮೂಲಕ, ಆ ಶಾಲೆಯಲ್ಲಿಯೇ ಹೆಣ್ಣು ಮಕ್ಕಳಿಗೆ ಕಾಲೇಜು ಶಿಕ್ಷಣವನ್ನು ಮುಂದುವರೆಸಲು ಅವಕಾಶವನ್ನು ಕಲ್ಪಿಸಲಾಯಿತು. ಈ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಹೆಣ್ಣು ಮಕ್ಕಳು ಮೇಲ್ಜಾತಿಗಳಿಗೆ ಸೇರಿದವರಾಗಿದ್ದು, ನಗರದ ಪ್ರಭಾವಿ ಕುಟುಂಬಗಳಿಂದ ಬಂದವರಾಗಿದ್ದರು. ಶಿಕ್ಷಣದ ಅವಕಾಶಗಳು ಸಮಾಜದ ಮೇಲ್‌ಸ್ತರಗಳ ಹೆಣ್ಣು ಮಕ್ಕಳಿಗೆ ಮಾತ್ರ ಲಭ್ಯವಾಗಿತ್ತೆನ್ನುವುದು ನಿಜವಾದರೂ, ಆಗಿನ ಕಾಲಘಟ್ಟದಲ್ಲಿ ಹೆಣ್ಣುಮಕ್ಕಳು ಮನೆಯಿಂದ ಹೊರಗೆ ಬಂದು ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾಗಿದ್ದರೂ ಎನ್ನುವುದೇ ಒಂದು ಮಹತ್ವದ ಬೆಳವಣಿಗೆ. ಇಪ್ಪತ್ತನೇ ಶತಮಾನ ಮೈಸೂರು ನಗರದ ಮಹಿಳಾ ಶಿಕ್ಷಣದ ಇತಿಹಾಸದಲ್ಲಿ ಒಂದು ಸುವರ್ಣಯುಗ. ಸರಿಸುಮಾರು ಕ್ರಿ.ಶ. 1902–03ನೇ ಇಸವಿಯಲ್ಲಿ ಮೈಸೂರಿನ ಮಹಾರಾಣಿ ಹೆಣ್ಣು ಮಕ್ಕಳ ಪ್ರೌಢಶಾಲೆಯನ್ನು ಕಾಲೇಜಿನ ಸ್ಥಾನಕ್ಕೆ ಏರಿಸಲಾಗಿದೆ. ವರ್ಷದಿಂದ ವರ್ಷಕ್ಕೆ ಈ ಕಾಲೇಜಿನಲ್ಲಿ ದಾಖಲಾದ ವಿದ್ಯಾರ್ಥಿನಿಯರ ಸಂಖ್ಯೆ ಏರುತ್ತಾ ಹೋಯಿತು. ಸರಿಸುಮಾರು ಕ್ರಿ.ಶ. 1920ನೇ ಇಸವಿಯ ವೇಳೆಗೆ ಈ ಕಾಲೇಜಿನಲ್ಲಿ 16 ಮಹಿಳೆಯರು ಅಧ್ಯಯನವನ್ನು ಮಾಡುತ್ತಿದ್ದರು ಎನ್ನುವುದು ಕಾಲೇಜಿನ ದಾಖಲೆಗಳಿಂದ ತಿಳಿದುಬರುತ್ತದೆ. ಸಹಶಿಕ್ಷಣಕ್ಕೆ ಸಾಮಾಜಿಕ ಸ್ವೀಕೃತಿ ಇಲ್ಲದಿದ್ದ ಕಾಲದಲ್ಲಿ, ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕಾಗಿಯೇ ಮೈಸೂರು ನಗರದಲ್ಲಿ ಸ್ಥಾಪನೆಗೊಂಡ ಮಹಾರಾಣಿ ಮಹಿಳಾ ಕಾಲೇಜು ಭಾರತದಲ್ಲೇ ಹೆಣ್ಣು ಮಕ್ಕಳ ಉನ್ನತ ಶಿಕ್ಷಣದ ಇತಿಹಾಸದಲ್ಲೇ ಒಂದು ವಿಶೇಷ ಸ್ಥಾನ ಪಡೆದಿದೆ.

ಸರಿಸುಮಾರು ಕ್ರಿ.ಶ. 1916ನೇ ಇಸವಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾದ ಮೇಲೆ ಮೈಸೂರು ನಗರದಲ್ಲಿ ಕಾಲೇಜುಗಳ ಸಂಖ್ಯೆ ಕ್ರಮೇಣ ಹೆಚ್ಚಾಗತೊಡಗಿ, ಮಹಿಳೆಯರಿಗೆ ಶಿಕ್ಷಣಾವಕಾಶಗಳು ವೃದ್ಧಿಸುತ್ತಾ ಹೋಗಿವೆ. ಇದೀಗ ಮೈಸೂರಿನಲೇ 11 ಮಹಿಳಾ ಕಾಲೇಜುಗಳು ಅಸ್ತಿತ್ವಕ್ಕೆ ಬಂದಿದ್ದು, ಇನ್ನುಳಿದ ಸುಮಾರು 25 ಕಾಲೇಜುಗಳಲ್ಲೂ ಹೆಣ್ಣು ಮಕ್ಕಳಿಗೆ ಪ್ರವೇಶವಕಾಶವು ಇರುವುದರಿಂದ ಮೈಸೂರು ಮಹಾನಗರದಲ್ಲಿ ಮಹಿಳಾ ಶಿಕ್ಷಣಕ್ಕೆ ಅತ್ಯಂತ ಉತ್ತೇಜನಪೂವಕವಾದ ವಾತಾವರಣವಿದೆ. ಇನ್ನು ಶಾಲೆಗಳ ವಿಚಾರದಲ್ಲಿ ಹೇಳುವುದಾದರೆ, 380 ಪ್ರಾಥಮಿಕ ಶಾಲೆಗಳು (07 ಹೆಣ್ಣು ಮಕ್ಕಳಿಗೆ ಮಾತ್ರ), 197 ಪ್ರೌಢಶಾಲೆಗಳು (14 ಹೆಣ್ಣು ಮಕ್ಕಳಿಗೆ ಮಾತ್ರ), 76 ಪದವಿ ಪೂರ್ವ ಕಾಲೇಜುಗಳು (06 ಹೆಣ್ಣು ಮಕ್ಕಳಿಗೆ ಮಾತ್ರ) ಇದೀಗ ಮೈಸೂರು ಮಹಾನಗರದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣವಕಾಶಗಳನ್ನು ಒದಗಿಸುತ್ತಿವೆ.

ಮೈಸೂರು ಮಹಾನಗರದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪೂರಕವಾದ ವ್ಯವಸ್ಥೆಗಳನ್ನು ಒದಗಿಸುವಂಥ ಪರಂಪರೆ ಹಿಂದಿನಿಂದ ಇದ್ದು, ಇಂದಿಗೂ ಆ ವ್ಯವಸ್ಥೆ ಮುಂದುವರೆದುಕೊಂಡು ಬಂದಿದೆ. ಸಾಮಾಜಿಕ ನ್ಯಾಯದ ಚಳುವಳಿಯಲ್ಲೂ ಈ ನಗರಕ್ಕೆ ತನ್ನದೇ ಆದಂತಹ ಇತಿಹಾಸವಿದ್ದು, ಗ್ರಾಮೀಣ ಹಾಗೂ ಸಾಮಾಜಿಕ, ಆರ್ಥಿಕ ಅನುಕೂಲಗಳಿಂದ ವಂಚಿತರಾದ ಹೆಣ್ಣು ಮಕ್ಕಳು ಮೈಸೂರಿನಲ್ಲಿರುವ ಶಿಕ್ಷಣದ ಅವಕಾಶಗಳನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಅವರಿಗಾಗಿ ಅನೇಕ ವಸತಿ ನಿಲಯಗಳನ್ನೂ ತೆರೆದಿರುವುದು ವಿಶೇಶವಾಗಿ ಮನಹರಿಸಬೇಕಾದಂತಹ ವಿಚಾರ. ಹಾಲಿ, ಮೈಸೂರಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳ ಮಕ್ಕಳಿಗಾಗಿ ಸ್ಥಾಪಿಸಿರುವಂತಹ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ಅನಂತರದ 30 ವಸತಿ ನಿಲಯಗಳಲ್ಲಿ ಶೇಕಡಾ 30ರಷ್ಟು ಹೆಣ್ಣು ಮಕ್ಕಳಿಗೆ ಮೀಸಲಾಗಿದ್ದು, ಇವು ಅವರು ತಮ್ಮ ಶಿಕ್ಷಣವನ್ನು ಮುಂದುವರೆಸಲು ಅನುಕೂಲವನ್ನು ಕಲ್ಪಿಸಿವೆ. ಕುಟುಂಬಗಳು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದರೆ, ಅದರ ಪರಿಣಾಮವನ್ನು ಬಹುತೇಕ ಕುಟುಂಬಗಳಲ್ಲಿ ಎದುರಿಸಬೇಕಾದವರು ಹೆಣ್ಣು ಮಕ್ಕಳೇ ಆಗಿದ್ದು, ಅವರನ್ನು ಶಾಲೆಗಳಿಂದ ಬಿಡಿಸಲಾಗುತ್ತದೆ. ಇಲ್ಲಿ ಶಾಲೆಗಳಿಗೆ ಕಳುಹಿಸುವುದೇ ಇಲ್ಲ, ಅದೇ ವಸತಿ, ಊಟ ಮುಂತಾದ ಸೌಲಭ್ಯಗಳನ್ನು ಒದಗಿಸಿದರೆ; ಕುಟುಂಬಗಳು ಹೆಣ್ಣು ಮಕ್ಕಳ ಶಿಕ್ಷಣದ ಬಗೆಗೆ ಸಕಾರಾತ್ಮಕ ಧೋರಣೆಗಳನ್ನು ತಳೆಯುವಂತಹ ಸಾಧ್ಯತೆಗಳು ಹೆಚ್ಚು. ಈ ನಿಟ್ಟಿನಲ್ಲಿ ಮೈಸೂರು ನಗರದ ಸ್ತ್ರೀಪರ ಚಿಂತನೆಗಳು ಮತ್ತು ಕಾರ್ಯಕ್ರಮಗಳು ಉಲ್ಲೇಖಾರ್ಹವೇ ಆಗಿರುತ್ತದೆ.

ಭಾರತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಇತಿಹಾಸದಲ್ಲಿ ಮೈಸೂರು ಮಹಾನಗರಕ್ಕೆ ಒಂದು ವಿಶೇಷವಾದ ಸ್ಥಾನವಿದೆ. ನೂರು ವರ್ಷಗಳ ಹಿಂದೆಯೇ ಹೆಣ್ಣು ಮಕ್ಕಳಿಗೆ ಜ್ಞಾನಾರ್ಜನೆಯ ಅವಕಾಶಗಳನ್ನು ತೆರೆದಿರಿಸಲು ಆಗಿನ ದೊರೆಗಳು ಮಾಡಿದ ಪ್ರಯತ್ನ. ಅದರ ಹಿಂದಿದ್ದ ಸದಾಶಯಗಳು

ಹಾಗೂ ಮುಂದಿನ ಕಾಲಘಟ್ಟಗಳಲ್ಲೂ ಸರ್ಕಾರ ಹಾಗೂ ನಾಗರಿಕ ಸಂಸ್ಥೆಗಳ ಬೆಂಬಲದಿಂದ ಮಹಿಳೆಯರ ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಿಕ್ಕ ಹಾಗೂ ಸಿಗುತ್ತಿರುವ ಉತ್ತೇಜನ ಇಡೀ ದೇಶದಲ್ಲೇ ಮೈಸೂರು ನಗರವನ್ನು ಒಂದು ಅಗ್ರಸ್ಥಾನದಲ್ಲಿ ನಿಲ್ಲಿಸಿದೆ ಎಂದು ಹೇಳುವುದು ಕೂಡ ಒಂದು ವಿಶೇಷವಾದ ಸಂಗತಿಯೇ ಆಗಿರುತ್ತದೆ.

## ಗ್ರಂಥಋಣ


1. **ಮೈಸೂರು ಜಿಲ್ಲಾ ಗ್ಯಾಸೆಟಿಯರ್,** ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು
2. **ಮೈಸೂರು ತಾಲೂಕು ಗ್ಯಾಸೆಟಿಯರ್,** ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು
3. **ಮೈಸೂರು ದರ್ಶನ,** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು
4. **ಕನ್ನಡ ವಿಷಯ ವಿಶ್ವಕೋಶ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
5. **ಮಹಾರಾಣಿ ವಿಜ್ಞಾನ ಕಾಲೇಜಿನ ವಾರ್ಷಿಕ ಸಂಚಿಕೆ**